## ಬಳೆ ತೊಡುವುದಿಲ್ಲ

ಅಂದು ಯುಗಾದಿ ಹಬ್ಬ, ಭಾನುವಾರ ಬೇರೆ. ಅಪರೂಪಕ್ಕೆ ತನ್ನ ಸ್ನೇಹಿತರನ್ನು ಸಿದ್ಧು ಮನೆಗೆ ಊಟಕ್ಕೆ ಆಹ್ವಾನಿಸಿದ್ದ. ರುಚಿಕಟ್ಟಾದ ಒಬ್ಬಟ್ಟು, ಶಾವಿಗೆ ಪಾಯಸ, ಅಂಬೊಡೆ... ಹೊಟ್ಟೆ ತುಂಬಾ ಊಟ ಮಾಡಿ ಸಂತೃಪ್ತರಾದರು ಸಿದ್ಧು ಗೆಳೆಯರು. ಕೊನೆಯಲ್ಲಿ ತಾಂಬೂಲ ತಂದಿಟ್ಟಳು ಸಿದ್ಧುವಿನ ಹೆಂಡತಿ. ಗೆಳೆಯನೊಬ್ಬ ಅವಳನ್ನು ಕುರಿತು, 'ಅಡುಗೆ ತುಂಬಾ ರುಚಿಯಾಗಿತ್ತಮ್ಮ, ಅಡುಗೆ ಮಾಡಿದವರ ಕೈಗೆ ಚಿನ್ನದ ಬಳೆ ತೊಡಿಸಬೇಕು' ಎಂದ. ಅದಕ್ಕೆ ಅವಳು, 'ತುಂಬಾ ಸಂತೋಷ, ಆದರೆ ನಮ್ಮ ಜಮಾನರು ಬಳೆ ತೊಡುವುದಿಲ್ಲ' ಎಂದಳು.

**ಎಂ.ಕೆ. ಮಂಜುನಾಥ್**





## ಒಳ್ಳೇ ಹೆಂಡತಿ

ನ್ಯಾಯಾಲಯದಲ್ಲಿ ರಾಜುವಿನ ಪ್ರಕರಣ ನಡೆಯುತ್ತಿತ್ತು. ರಾಜು, 'ನನಗೆ ವಿಚ್ಛೇದನ ಕೊಡಿಸಿ. ಕಳೆದ ಆರು ತಿಂಗಳಿಂದ ನನ್ನ ಹೆಂಡತಿ ನನ್ನ ಜೊತೆ ಮಾತೇ ಆಡಿಲ್ಲ' ಎಂದ. ನ್ಯಾಯಾಧೀಶರು, 'ಮತ್ತೊಮ್ಮೆ ಯೋಚಿಸಿ, ಇಂಥ ಒಳ್ಳೇ ಹೆಂಡತಿ ಸಿಗುವುದು ತುಂಬಾ ಕಷ್ಟ' ಎಂದರು.

**ಶೋಭಾ ಪ್ರಮೋದ್**

ಚಿತ್ರಗಳು: ಗಣೇಶ ಆಚಾರ್ಯ